Expenditure incurred in Extending the Services of Electricity in the State.

*Q.—7. **Sri M. V. KRISHNAPPA** (Kolar District—General).—

Will the Government be pleased to state :—

(*a*) the total amount of money that was spent to extend the services of electricity in the State during the years 1947-48, 1948-49, 1949-50 and 1950-51;

(*b*) the quantity of electric power that was produced in the year 1947-48 and 1950-51 ?

*A.—**The Hon'ble Sri K. T. BHASHYAM** (Minister for Law and Labour).—

(*a*) The total amount of money spent under capital grants for extending services of electricity in the State :—

		Rs.
During the year	1947-48	... 77,34,727
,, ,,	1948-49	... 1,82,08,466
,, ,,	1949-50	... 1,94,68,420 (for 9 months only)
,, ,,	1950-51	... 1,20,23,086 (for 10 months only)

(*b*) The quantity of power produced :—

	B. O. T. U.
During the year 1947-48 (for 12 months) ...	3,43,250,700
,, ,, 1950-51 (for 9 months from 1-4-50) ...	3,42,371,450

ಶ್ರೀ ಎಂ. ವಿ. ಕೃಷ್ಣಪ್ಪನವರು.—ತಾವು ಹಣ ಖರ್ಚು ಮಾಡುವುದು ಒಂದು ಯೋಜನೆ ಪ್ರಕಾರ ಅಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಆ ಯೋಜನೆ ಪ್ರಕಾರ ಸಂಸ್ಥಾನದ ಎಲ್ಲಾ ಭಾಗಗಳಿಗೂ ಸರಿಸಮಾನವಾಗಿ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೀರಾ ?

ಮಾನ್ ಶ್ರೀ ಕೆ. ಟಿ. ಭಾಷ್ಯಂರವರು.—ಸರಿಸಮಾನವಾಗಿ ಕೊಡಬೇಕೆಂದು ಪ್ರಯತ್ನ ಪಡುತ್ತಿದ್ದೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸಂಸ್ಥಾನದಲ್ಲಿ, ಅನೇಕ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲೇ ಇನ್ನೂ ವಿದ್ಯುಚ್ಛಕ್ತಿ ಸರಬರಾಯಿ ಆಗಿಲ್ಲದೇ ಇರುವಾಗ, ವಿದ್ಯುಚ್ಛಕ್ತಿ ಇರುವ ಕಡೆಗಳಿಗೇ ಹೆಚ್ಚು ಹಣ ಖರ್ಚಾಗುತ್ತಿದೆ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ವಿದ್ಯುಚ್ಛಕ್ತಿಯ ಬಾಬು ಕೇಂದ್ರಕ್ಕೆ ನೇರುತ್ತದೆ ಎನ್ನುವುದರಲ್ಲಿ ಸತ್ಯಾಂಶವಿದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ.

Sri H. M. MALLIKARJUNAPPA (Chikmagalur District—General).—What is the amount spent for rural electrification ?

The Hon'ble Sri K. T. BHASHYAM.—Rs. 50 lakhs have been spent during the year.

Sri H. M. MALLIKARJUNAPPA.—Out of the total amount spent what is the amount spent for rural electrification ?

The Hon'ble Sri K. T. BHASHYAM.—About Rs. 2 crores must have been spent.

Sri H. M. MALLIKARJUNAPPA.—The power produced in 1950–51 is less than the power produced in 1947-48. May I know the reason why it is less?

The Hon'ble Sri K. T. BHASHYAM.—The quantity of power produced that is given for 1950–51 is for nine months only. The answer is there.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಇಷ್ಟೊಂದು ವಿದ್ಯುಚ್ಛಕ್ತಿ ಉತ್ಪನ್ನ ಮಾಡಿದ್ದೀರಿ. ಇದನ್ನು ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ಒದಗಿಸಿದ್ದೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು:—ಅದೆಲ್ಲಾ ವಿವರ ಆಯತು. ಈಗ ಅದನ್ನು ಒದಗಿಸಲು ಸಾಧ್ಯವಿಲ್ಲವಾಗಿದೆ.

ಶ್ರೀ ಎಸ್. ಕರಿಯಪ್ಪನವರು.—1950–51 ರಲ್ಲಿ ಉತ್ಪನ್ನವಾಗಿರತಕ್ಕ ವಿದ್ಯುಚ್ಛಕ್ತಿಯನ್ನು ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ಒದಗಿಸಿದ್ದೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ತಪಶೀಲು ಈಗ ಕೊಡುವುದಕ್ಕಾಗುವುದಿಲ್ಲ. ಬೇಕಾದರೆ ನಂತರ ಆ ತಪಶೀಲನ್ನು ಕೊಡಿಸುತ್ತೇನೆ.

ಶ್ರೀ ಎಸ್. ಕರಿಯಪ್ಪನವರು.— ವ್ಯವಸಾಯದ ಪಂಪುಗಳಿಗೆ ಎಷ್ಟು ಪರ್ಸೆಂಟ್ ಒದಗಿಸಲಾಗಿದೆ ಎಂಬುದನ್ನು ಹೇಳುತ್ತೀರಾ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾದರೆ ಯಾವ ನೀತಿಯನ್ನಿಟ್ಟುಕೊಂಡು ಒದಗಿಸುತ್ತೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ಸ್ಪಷ್ಟವಾಗಿ ಅರ್ಥವಾಗುವುದಿಲ್ಲ. ಅವರ ಅಭಿಪ್ರಾಯ ಹೀಗಿರಬಹುದು. ವ್ಯವಸಾಯದ ಪಂಪುಗಳಿಗೆ ಹೆಚ್ಚು ಪವರ್ ಕೊಡಬೇಕು. ಅದಾದಮೇಲೆ ಕಾಟೇಜ್ ಇಂಡಸ್ಟ್ರೀಸ್‌ಗೆ ಕೊಡಬೇಕು. ನಂತರ ದೊಡ್ಡ ಕೈಗಾರಿಕೆಗಳಿಗೆ ಕೊಡಬೇಕು. ಇವುಗಳಿಗೆಲ್ಲಾ ಆದಮೇಲೆ ರೂರರ್ ಎಲೆಕ್ಟ್ರಿಫಿಕೇಷನ್‌ಗೆ ಒದಗಿಸಬೇಕೆಂದು ತಿಳಿಸುತ್ತಿರಬಹುದು. ಅದೇ ರೀತಿಯಲ್ಲೇ ನಾವು ಈಗ ನಡೆಯುತ್ತಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ವ್ಯವಸಾಯದ ಪಂಪುಗಳಿಗೆ ಕೇಳಿರುವ ಪೈಕಿ ಈಚೀಚೆಗೆ ಕೇಳಿರುವುದಕ್ಕೆ ಕೊಡುವ ನೀತಿ ಪ್ರಾಮುಖ್ಯವಾಗಿದೆಯೇ, ಬಹಳ ಹಿಂದಿನಿಂದ ಕೇಳುತ್ತಿರುವುದಕ್ಕೆ ಕೊಡುವ ನೀತಿ ಪ್ರಾಮುಖ್ಯವಾಗಿದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಿಂದಿನಿಂದ ಕೇಳುತ್ತಿರುವವರಿಗೆ ಪ್ರಾಮುಖ್ಯತೆ ಕೊಡುತ್ತೇವೆ. ಆ ರೀತಿ ಕೊಡುವುದಕ್ಕೆ ಸಾಧ್ಯವಿಲ್ಲದಿರುವಾಗ ಈಗ ಕೇಳುವವರಿಗೆ ಕೊಡಲು ಸಾಧ್ಯವಿದ್ದರೆ ಕೊಡುತ್ತೇವೆ.

ಶ್ರೀ ಎಸ್. ಕರಿಯಪ್ಪನವರು.—ಹೆಚ್ಚು ಒತ್ತಾಯ ಮಾಡುವವರಿಗೆ ಕೊಡುತ್ತೀರಿ ಎಂಬುದು ನಿಜವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ಶುದ್ಧ ತಪ್ಪು ತಿಳಿವಳಿಕೆ.

ಶ್ರೀ ಎಸ್. ಕರಿಯಪ್ಪನವರು.—ಆ ರೀತಿ ಕೊಟ್ಟರ ತಕ್ಕ ದೃಷ್ಟಾಂತ ಇಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ.

ಶ್ರೀ ಎಸ್. ಕರಿಯಪ್ಪನವರು.—ಅನೇಕ ವರ್ಷಗಳಿಂದ ಕೇಳುತ್ತಿದ್ದರೂ ವ್ಯವಸಾಯದ ಪಂಪುಗಳಿಗೆ ವಿದ್ಯುಚ್ಛಕ್ತಿ ಒದಗಿಸದೇ ಇರುವ ಕೇಸುಗಳು ಎಷ್ಟು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ವಿದ್ಯುಚ್ಛಕ್ತಿ ಇಲ್ಲದೇ ಇರುವ ಕಡೆ ಕೇಳಿದರೆ ಹೆಚ್ಚು ಹಣ ಖರ್ಚಾಗುತ್ತದೆ. ಹತ್ತಿರ ಇರುವ ಕಡೆ ಕೊಡುತ್ತೇವೆ.

ಶ್ರೀ ಎಸ್. ಕರಿಯಪ್ಪನವರು.—ವಿದ್ಯುಚ್ಛಕ್ತಿ ಇದ್ದ ಕಡೆಯೂ ಕೊಡದೇ ಇರುವ ಸಂದರ್ಭ ಇಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಂಥ ಸಂದರ್ಭ ನಮ್ಮ ಗೋಚರಕ್ಕೆ ಬಂದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ವಿದ್ಯುಚ್ಛಕ್ತಿ ಉತ್ಪನ್ನಮಾಡಲು ಒಂದು ಯೂನಿಟ್ಟಿಗೆ ಎಷ್ಟು ಖರ್ಚಾಗುತ್ತದೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ಹೇಳುವುದು ಸರಿಯಲ್ಲ, ಸೂಕ್ತವಲ್ಲ, ಅದಕ್ಕೇ ಹೇಳುವುದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಹಿಂದೆ ಸರ್ಕಾರದವರು ಹೇಳಿರುವುದು ಗೊತ್ತಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೇಳಿದ್ದರೂ ಹೇಳಿರಬಹುದು. ನನಗೆ ಗೊತ್ತಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಮಿನಿಮಂ ಎಷ್ಟು, ಒಂದು ಆಣೆಯೇ, ಅಥವಾ 6 ಕಾಸೇ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದು ಹೇಳುವುದು ಸರಿಯಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಉತ್ಪನ್ನವಾಗುವ ಪವರ್ ಅಷ್ಟು ಉಪಯೋಗವಾಗುತ್ತಿದೆಯೆ, ಅಥವಾ ಏನಾದರೂ ವೇಸ್ಟ್ ಆಗುತ್ತಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಎಲ್ಲಾ ಖರ್ಚಾಗುತ್ತಾ ಇದೆ.

ಶ್ರೀ ಎಸ್. ರಂಗರಾಮಯ್ಯನವರು.—ವಿದ್ಯುಚ್ಛಕ್ತಿ ಒದಗಿಸುವಾಗ ಒಂದೊಂದು ಕಡೆಗೆ ಒಂದೊಂದು ದರ ಪ್ರಕಾರ ಕೊಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು.

ಶ್ರೀ ಎಸ್. ರಂಗರಾಮಯ್ಯನವರು.—ಮೈನ್ಸ್‌ಗೆ ಎಷ್ಟು, ಯಾವ ದರದಂತೆ ಕೊಡುತ್ತೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತಪಸೀಲು ಇದೆ. ಅದರ ಪ್ರಕಾರ ಕೊಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ನೀರಾವರಿ ವಗೈರೆಗಳಿಗೆ ಕೊಡುವುದಕ್ಕಿಂತ ಕಮ್ಮಿ ಅಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ. ಜಾಸ್ತಿ.

ಶ್ರೀ ಎಸ್. ರಂಗರಾಮಯ್ಯನವರು.—ಕೊಳ್ಳೆಗಾಲ ವಗೈರೆ ಪರಸ್ಥಳಗಳಿಗೆ ಬೇರೆ ದರದಂತೆ ಕೊಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು.

ಶ್ರೀ ಎಸ್. ರಂಗರಾಮಯ್ಯನವರು.—ಈಗ್ಗೆ ಮೂರು ವರ್ಷಗಳ ಕೆಳಗೆ ಹೇಗಿತ್ತು? ಈಗ ಜಾಸ್ತಿಯಾಗಿದ್ದರೆ ಎಷ್ಟುಮಟ್ಟಿಗೆ ಜಾಸ್ತಿಯಾಗಿದೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈಗ ಬಹಳ ಜಾಸ್ತಿಯಾಗಿದೆ. ಇಷ್ಟು ಎಂದು ಹೇಳಲಾರೆ. ಸುಮಾರು ಒಂದಕ್ಕೆ ಎರಡರಷ್ಟು ಮೂರರಷ್ಟು ಜಾಸ್ತಿಯಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇದಕ್ಕೆ ಉಪಯೋಗಿಸುವ ವಸ್ತುಗಳಲ್ಲಿ ನಮ್ಮ ದೇಶದ್ದು ಎಷ್ಟು ಭಾಗ, ಹೊರಗಿನದು ಎಷ್ಟು ಭಾಗ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಷ್ಟು ಭಾಗ ಎಂದು ಹೇಳುವುದಕ್ಕಾಗುವುದಿಲ್ಲ. ಬಲಗ ಕಂಭಗಳು ನಮ್ಮ ದೇಶದವು, ತಾಮ್ರದ ತಂತಿ ಮುಂತಾದುವು ಹೊರಗಿನಿಂದ ಬರುತ್ತವೆ.

ಶ್ರೀ ಎಸ್. ರಂಗರಾಮಯ್ಯನವರು.—ಪೋರ್ಸ್‌ಲೇನ್ ಇನ್ಸುಲೇಟರುಗಳು ಮುಂತಾದುವೆಲ್ಲಾ ನಮ್ಮ ದೇಶದಲ್ಲೇ ಉತ್ಪತ್ತಿಯಾಗುತ್ತವಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತಕ್ಕಮಟ್ಟಿಗೆ ನಮ್ಮ ದೇಶದಲ್ಲೂ ಉತ್ಪತ್ತಿಯಾಗುತ್ತೆ; ಸ್ವಲ್ಪ ಹೊರಗಿನಿಂದಲೂ ಬರುತ್ತೆ.

ಶ್ರೀ ಎಸ್. ರಂಗರಾಮಯ್ಯನವರು.—ಟ್ರಾನ್ಸ್‌ಫಾರ್ಮರ್‌ಗಳು ನಮ್ಮ ದೇಶದಲ್ಲಿ ಎಷ್ಟಾಗುತ್ತವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—250-300 ಆಗುತ್ತವೆ.

ಶ್ರೀ ಎಸ್. ರಂಗರಾಮಯ್ಯನವರು.—ಯಾವ ಸ್ಕೈಜಿನದು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—5 ಕೆ. ವಿ. ಎ. ಇಂದ 500 ಕೆ. ವಿ. ಎ. ವರೆಗೂ.

ಶ್ರೀ ಎಸ್. ರಂಗರಾಮಯ್ಯನವರು.—ಎಲ್ಲಾ ಸ್ಕೈಜಿನದನ್ನೂ ಮಾಡುವುದಕ್ಕಾಗುವುದಿಲ್ಲವೇ!

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಎಲ್ಲಾ ಮಾಡುವುದಕ್ಕಾಗುವುದಿಲ್ಲ. ಹೆಚ್ಚೆಂದರೆ 1000ದ ವರೆಗೂ ಆಗುತ್ತೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ Heating Services ಗೆ ಸಾಕಾದಷ್ಟು ಟ್ರಾನ್ಸ್‌ಫಾರ್ಮರ್‌ಗಳಿಲ್ಲದಿರುವುದರಿಂದ ಬಹಳ ತಡವಾಗುತ್ತಿರುವುದು ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು.

ಶ್ರೀ ಎಸ್. ರಂಗರಾಮಯ್ಯನವರು.—ಅದನ್ನು ಸರಿಪಡಿಸುವುದಕ್ಕೆ ಏರ್ಪಾಡುಮಾಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೆಚ್ಚಿಗೆ ಟ್ರಾನ್ಸ್‌ಫಾರ್ಮರುಗಳನ್ನು ತಯಾರಿಸುವುದಕ್ಕೆ ಏರ್ಪಾಡುಮಾಡಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಇನ್ನೇನೂ ತೊಂದರೆಯಿಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇದ್ದೇ ಇದೆ.

ಶ್ರೀ ಎಚ್. ಸಿದ್ದವೀರಪ್ಪನವರು. (ಚಿತ್ರದುರ್ಗ ಜಿಲ್ಲೆ).—ನೀರಾವರಿ ಕೆಲಸಗಳಿಗೂ ಹೊಸದಾಗಿ ಪಂಪುಗಳು ಮುಂತಾದುವುಗಳನ್ನು ಕೊಡುವುದಕ್ಕಾಗಿ ಶೇಕಡ ಎಷ್ಟು ಭಾಗ ಹಣ ಖರ್ಚುಮಾಡಬೇಕೆಂದು ಮಾಡಿದ್ದೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು—ಶೇಕಡ ಇಷ್ಟು ಎಂದು ಹೇಳುವುದಕ್ಕಾಗುವುದಿಲ್ಲ. ಇಂಡಿಯಾ ಸರ್ಕಾರದವರು 50-51ನೆಯ ಸಾಲಿಗೆ ಹೆಚ್ಚಿಗೆ ಆಹಾರೋತ್ಪತ್ತಿಗೆಂದು 50 ಲಕ್ಷ ರೂಪಾಯಿಗಳನ್ನೂ 51-52

ನೆಯ ಸಾಲಿಗೆ ಮತ್ತೆ 50 ಲಕ್ಷ ರೂಪಾಯಿಗಳನ್ನೂ ಕೊಡಬೇಕೆಂದು ಮಾಡಿದ್ದಾರೆ. ಇದಿಷ್ಟು ಒಂದು ಕೋಟಿ ರೂಪಾಯಿಗಳನ್ನೂ ವ್ಯವಸಾಯದ ಪಂಪುಗಳು ಮುಂತಾದವುಗಳಿಗಾಗಿ ಉಪಯೋಗಿಸುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪನವರು.—ವ್ಯವಸಾಯದ ಪಂಪುಗಳಿಗೆ ಉಪಯೋಗಿಸುವಾಗ ಒಂದು ಮೈಲಿ ಎರಡು ಮೈಲಿ ಹತ್ತಿರದ ಪ್ರದೇಶಗಳಲ್ಲಿ ಅವಶ್ಯಕತೆಯಿರುವುದು ತಮ್ಮ ಗಮನಕ್ಕೆ ಬಂದರೆ ಅದಕ್ಕೂ priority ಕೊಡುತ್ತೀರಾ ;

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೈಲಾದ ಮಟ್ಟಿಗೂ ಕೊಡುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪನವರು.—ನೀರಾವರಿ ಕೆಲಸಗಳಿಗಾಗಿ ಮೈದಾನ ಪ್ರದೇಶಗಳಿಂದ ಪಂಪುಗಳಿಗೆ ಹೆಚ್ಚಿಗೆ ಕೋರಿಕೆಗಳು ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು:—ಬಂದಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಈ ಬಗ್ಗೆ ಇದುವರೆಗೂ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ !

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೈಲಾದ ಮಟ್ಟಿಗೂ ಸಹಾಯಮಾಡುತ್ತಿದ್ದೇವೆ.

Sri G. A. ACHARYA (Bangalore District—General).—Out of the generated power, what is the total percentage of the power consumed by industries ?

The Hon'ble Sri K. T. BHASHYAM.—I could not tell you exactly.

Sri G A. ACHARYA.—In view of the fact that we are generating so much power and in view also of the food shortage, is it not necessary for the Government to give priority to pumps etc.?

The Hon'ble Sri K. T. BHASHYAM.—I have already answered that we are giving the highest priority to agricultural pumps and cottage industries and next to large industries.

Sri Kadidal MANJAPPA (Shimoga District—General).—Is it possible to meet the power demand in the State out of the power that we are producing ?

The Hon'ble Sri K. T. BHASHYAM.—To-day we are in the position to meet the demand. But very soon the demand would out-run the power.

Sri V. M. MASCARENHAS (Retroceded Area—General).—By how much percent the power would increase if Jog power is completed ?

The Hon'ble Sri K. T. BHASHYAM.—If Jog Power is completed, we would be able to get 102 thousand K. W. in addition to 40 thousand K. W. we are generating at Sivasamudram and Shimsha. The total would be 142 thousand K. W.

ಶ್ರೀ ಜಿ. ನಾರಾಯಣ ಗೌಡರು (ಕೋಲಾರ ಜಿಲ್ಲೆ)—ಹಳ್ಳಿಗಾಡುಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವ ಯೋಜನೆಯ ಪ್ರಕಾರ ಈಗ ಹೊಸದಾಗಿ ಎಲ್ಲೆಲ್ಲಿ ಕೊಟ್ಟಿದ್ದೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದಕ್ಕೆ ಒಂದು ದೊಡ್ಡಪಟ್ಟಿಯಿದೆ. ಬೇಕಾದರೆ ಆಮೇಲೆ ಆ ಪಟ್ಟಿಯನ್ನು ತಮಗೆ ಕೊಡುತ್ತೇನೆ.

Sri H.C. LINGA REDDY (Kolar District—General).—Have you got any new schemes for generating power?

The Hon'ble Sri K. T. BHASHYAM.—Yes, many more. We want to generate power at Mekedatu and at Honnemaradu. We want to increase the output at Shimsha.

Sri H. C. LINGA REDDY.—Are you supplying power to any neighbouring States ?

The Hon'ble Sri K. T. BHASHYAM.—Yes ; and we have agreed to supply more.

Sri H. C. LINGA REDDY.—Have the Government of India given any loan for this purpose ?

The Hon'ble Sri K. T. BHASHYAM.—It is under negotiation.

Hydro-Electric Scheme at Mekedatu.

*Q.—28. **Sri S. KARIAPPA** (Bangalore District—General).—

Will the Government be pleased to state :—

the progress made in respect of taking up the Hydro-Electric Scheme at Mekedatu ?

A.—**The Hon'ble Sri K. T. BHASHYAM** (Minister for Law and Labour).—

The Mekedatu Scheme has been surveyed and the Project has been prepared. Negotiations with the Government of Madras to secure necessary authority to execute the work have been going on. There are still some points at variance and these are under discussion and correspondence.

ಶ್ರೀ ಎಸ್. ಕರಿಯಪ್ಪನವರು—ಮೇಕೆದಾಟ್ ವಿದ್ಯುತ್ ಯೋಜನೆಯ ಸಂಬಂಧದಲ್ಲಿ ಮದ್ರಾಸ್ ಸರ್ಕಾರದವರೊಡನೆ ಎಷ್ಟು ಕಾಲದಿಂದ ಸಂಧಾನ ನಡೆಯುತ್ತಿದೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬಹಳ ಕಾಲದಿಂದ 20-25 ವರ್ಷಗಳಿಂದ ನಡೆಯುತ್ತಿದೆ.